(*a*) The Government of the former Bombay State had taken such a decision.

(*b*) Yes; only one.

(*c*) No request from the Society for refund of the amount has been received. However, this matter is being examined.

Members' representations

(*Sri N. O. Samaji spoke in Marathi and attempted to make a representation*)

Mr. SPEAKER.—I am not going to take notice of what the Hon'ble Member says. If he wants to make any statement or ask any question, he will have to see me in my chambers and inform the matter beforehand. But if he wants to make use of this opportunity to agitate for a certain cause, I will never allow it.

(*Sri N. O. Samaji withdrew from the House*)

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಈ ಸಭೆಯಲ್ಲಿ ಮೊನ್ನೆ ಪ್ರಶ್ನೋತ್ತರ ಕಾಲದಲ್ಲಿ ಮಂತ್ರಿವರ್ಯರು ಉತ್ತರ ತಿಳಿಸಿದ್ದನ್ನು ನೋಡಿದರೆ ಸಾಮಾನ್ಯವಾಗಿ ಒಂದು ವರ್ಷದ ಹಿಂದೆ ಕಳುಹಿಸಿದಂಥ ಪ್ರಶ್ನೆಗಳಿಗೆ ಉತ್ತರ ಹೇಳತಕ್ಕ ಪದ್ಧತಿ ಜಾರಿಯಲ್ಲಿ ಇದೆ. ಈ ಉತ್ತರಗಳಿಂದ ಇಲ್ಲಿನಮ್ಮ ಮುಂದೆ ಹೇಳತಕ್ಕ ಉತ್ತರಗಳೆಲ್ಲಾ ತಪ್ಪಾಗಿರುತ್ತವೆ. ನಾನು ಈ ಸಂದರ್ಭದಲ್ಲಿ ಈ ಸಭೆಯ ಘನತೆ ಮತ್ತು ಗೌರವದ ದೃಷ್ಟಿಯಿಂದ ಹೇಳುವುದಾದರೆ ಈ ರೀತಿ ಉತ್ತರ ಕೊಡುವುದು ಈ ಸಭೆಯ ಘನತೆಗೆ ತುಂಬ ಕುಂದಾಗಿದೆ. ಆದ್ದರಿಂದ ಈಗ ಸ್ಪೀಕರ್ ಅವರು ಹೇಳಿರುವ ರೀತಿಯಲ್ಲಿ ನಮ್ಮ ಮುಂದೆ 4,000 ಪ್ರಶ್ನೆಗಳು ಇವೆ. ಈಗಾಗಲೇ 2,000 ಪ್ರಶ್ನೆಗಳಿಗೆ ಉತ್ತರ ಬಂದಿದೆ. ಇನ್ನೂ 2,000 ಪ್ರಶ್ನೆಗಳಿಗೆ ಉತ್ತರ ಬರಬೇಕಾಗಿದೆ. ನಮಗೆ ಇನ್ನೂ ಉಳಿದಿರತಕ್ಕದ್ದು ಮೂರು ವರ್ಷ. ಈ ಮೂರು ವರ್ಷಗಳಲ್ಲಿ ದಿವಸಕ್ಕೆ 15 ಪ್ರಶ್ನೆಯಂತೆ ಆದರೂ ಕೂಡ ಈ 2,000 ಪ್ರಶ್ನೆಗಳು ಪೂರ್ತಿ ಆಗುವುದಿಲ್ಲ. ಹಾಗಿರುವಾಗ ಮುಂದೆ ಕಳುಹಿಸಿತಕ್ಕ ಪ್ರಶ್ನೆಗಳಿಗೆ ಉತ್ತರ ದೊರೆಯುವ ಹಾಗೆಯೇ ಇಲ್ಲ. ಆದ್ದರಿಂದ ಆ 2,000 ಪ್ರಶ್ನೆಗಳಿಗೆ ಆಯಾ ಸದಸ್ಯರಿಗೇ ನೇರವಾಗಿ ಉತ್ತರ ಕಳುಹಿಸುವುದರಿಂದ ಮಾನ್ಯ ಮಂತ್ರಿಗಳಿಗೂ ಒಳ್ಳೆಯದಾಗುತ್ತದೆ; ಮತ್ತು ಸದಸ್ಯರಿಗೂ ಸಹ ಅನುಕೂಲವಾಗುತ್ತದೆ. ಹೊಸ ರೂಲ್ಸ್ ಪ್ರಕಾರ 15 ದಿವಸದೊಳಗೆ ಉತ್ತರಕೊಡತಕ್ಕ ನಿಯಮವನ್ನು ಮುಂದಿನ ಅಧಿವೇಶನದಿಂದ ಜಾರಿಗೆ ತರುವುದು ಬಹಳ ಒಳ್ಳೆಯದೆಂದು ಸಲಹೆಮಾಡುತ್ತೇನೆ; ಮತ್ತು ಇನ್ನು ಮುಂದೆ ಮಂತ್ರಿಗಳವರು ಜವಾಬುಕೊಡುವಾಗ ಸಾಧ್ಯವಾದ ಮಟ್ಟಿಗೂ ಒಂದೆರಡು ದಿವಸದ ಹಿಂದೆಯೇ ಉತ್ತರವನ್ನು ತರಿಸಿಕೊಂಡು ಈ ಸಭೆಯಲ್ಲಿ ಉತ್ತರ ಹೇಳುವುದು ನೂಕ್ತ ಮತ್ತು ಸಭೆಯ ಘನತೆಗೂ ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಈಗಾಗಲೇ ಸರ್ಕಾರದ ಕಡೆಯಿಂದ ಲೆಜಿಸ್ಲೇಚರ್ ಸೆಕ್ರೆಟೇರಿಯೇಟ್ ಕಡೆಗೆ ಎಷ್ಟೋ ಪ್ರಶ್ನೆಗಳಿಗೆ ಉತ್ತರ ಕಳುಹಿಸಲಾಗಿದೆ. ಅಧ್ಯಕ್ಷರು ಒಪ್ಪಿದರೆ, ಸಭೆಯವರು ಒಪ್ಪಿದರೆ ಸರ್ಕಾರದ ಕಡೆಯಿಂದ 15 ದಿವಸದೊಳಗೆ ಉತ್ತರ ಕೊಡಲಿಕ್ಕೆ ಏನೂ ತೊಂದರೆ ಇಲ್ಲ.

Sri C. J. MUCKANNAPPA (Gubbi).—May I know the views of the Chair?

Dr. R. NAGAN GOWDA (Hospet).—Some time ago, on the very first day of the Session, I raised that question and I also made a request that we were in the habit of getting a statement as to the number of questions for which the Government have given answers and the number for which answers have not been given. If that information is furnished, it will be very useful.

ಅಧ್ಯಕ್ಷರು.—ಶ್ರೀಮಾ ನರಸಿಂಹೇಗೌಡರು ಮೊದಲೇ ಈ ಪ್ರಶ್ನೆಯನ್ನು ಸಭೆಯಲ್ಲಿ ಎತ್ತುವುದಕ್ಕೆ ಅನುಮತಿಕೊಡಿ ಎಂದು ಕೇಳಿದ್ದರು. ಅದಕ್ಕೇ ಕೊಟ್ಟಿದ್ದೇವೆ. ಆದಕಾರಣ ಅವರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಈಗ ಸರ್ಕಾರದ ವತಿಯಿಂದ ಎಷ್ಟು ಪ್ರಶ್ನೆಗಳಿಗೆ ಉತ್ತರ ಬಂದಿದೆ; ಅದೆಲ್ಲವನ್ನು ಪ್ರಿಂಟ್‌ಮಾಡಿಸಿ ಸಂಬಂಧಪಟ್ಟವರು ಯಾರು ಇದ್ದಾರೋ ಅವರಿಗೆ ಕೊಡಲಿಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಆ ಪ್ರಶ್ನೆಗಳಿಗೆ ಕೊಟ್ಟಂಥ ಉತ್ತರವನ್ನು ಈ ಸದನದಲ್ಲಿ ತೆಗೆದುಕೊಂಡು ಪರಿಸಮಾಪ್ತಿಗೊಳಿಸುವ ವರೆಗೂ ಪ್ರಕಟಿಸಬಾರದು. ಮಾಡಿದರೆ ಅದು breach of privilege ಆಗುತ್ತದೆ. ಹೊಸ ನಿಯಮಗಳು ಬರುತ್ತವೆ. ಹಿಂದಿನ ಪ್ರಶ್ನೆಗಳು ಹೊಸ ನಿಯಮಗಳಿಗೆ ಅಧೀನವಾಗಿ ಬಾರದಿದ್ದರೆ ಆ ಪ್ರಶ್ನೆಗಳಿಗೆ ಬಂದ ಉತ್ತರಗಳನ್ನು ಸಂಬಂಧಿಸಿದಂಥ ಎಲ್ಲ ಸದಸ್ಯರಿಗೂ ಕಳುಹಿಸಲಿಕ್ಕೆ ತೊಂದರೆ ಇಲ್ಲ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಅಲ್ಲಯ ವರೆಗೂ ಈಗಿರುವಂತೆಯೇ ನಡೆದುಕೊಂಡು ಹೋಗುತ್ತದೆ ತಾನೆ?

ಅಧ್ಯಕ್ಷರು.—ಇದೇ ಪ್ರಕಾರ ವ್ಯವಸ್ಥೆ ಮಾಡಲಾಗುತ್ತದೆ.

Sri C. J. MUCKANNAPPA.—The House has accorded leave to a particular Member I want to know whether it would be in order if that Hon'ble Member takes his seat in the Assembly even before the expiry of the leave granted by this House.

Mr. SPEAKER.—It is perfectly in order. The Hon'ble Member to whom leave had been granted by this House, had been away at Delhi for a certain purpose. If he could finish his work sooner and if he is in a position to